ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.

ಸಿ.ಸಿ.67/2021

| | | |
|---|---|---|
| ಸಾಕ್ಷಿದಾರರ ಹೆಸರು : | ಎಸ್.ವೆಂಕಟೇಶ್ ಕುಮಾರ್ | ಡಿ.ಡಬ್ಲ್ಯೂ.2 |
| ತಂದೆಯ ಹೆಸರು : | ಸಿ.ಕೆ.ಸುರೇಶ್ | |
| ವಯಸ್ಸು : | 43 ವರ್ಷ | |
| ವೃತ್ತಿ : | ವ್ಯಾಪಾರ | |
| ವಾಸ : | ಕಳಸ | |

ದಿನಾಂಕಃ 15-07-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದಃ-

ನಿಪಿ-6 ರಲ್ಲಿ ಇರುವ ಸಹಿ ನನ್ನದು. ಸದರಿ ಸಹಿಯನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಎಸ್.ಪಿ ಕಛೇರಿಯ ಮುಂದೆ ಹಾಕಿರುತ್ತೇನೆ. ಈಗ ಸುಮಾರು 6-7 ವರ್ಷದ ಹಿಂದೆ ನಾನು ಎಸ್.ಪಿ ಕಛೇರಿಗೆ ಬಂದಿದ್ದಾಗ ನನಗೆ ನರೇಂದ್ರರವರು ಸಿಕ್ಕಿದ್ದು ಅವರು ಎಸ್.ಪಿ ಕಛೇರಿಯಲ್ಲಿ ದೂರನ್ನು ನೀಡಿದ ಬಗ್ಗೆ ನನಗೆ ತಿಳಿಸಿರುತ್ತಾರೆ. ಮಧ್ಯಾಹ್ನದ ನಂತರ ನನಗೆ ಫೋನ್ ಮಾಡಿ ಸಾಕ್ಷಿಗೆ ಒಂದು ಸಹಿಯನ್ನು ಹಾಕುವಂತೆ ಕೋರಿಕೊಂಡಿರುತ್ತಾರೆ. ಆ ಪ್ರಕಾರ ನಾನು ನಿಪಿ-6 ಕ್ಕೆ ಸಹಿಯನ್ನು ಹಾಕಿರುತ್ತೇನೆ. ನರೇಂದ್ರರವರು ಚಂದ್ರಶೇಖರ್ ಎನ್ನುವವರಿಗೆ ಹಣವನ್ನು ನೀಡಿದ್ದು ಸದರಿ ಚಂದ್ರಶೇಖರ್ ರವರು ಹಣವನ್ನು ವಾಪಾಸ್ ನೀಡಿಲ್ಲ ಎಂದು

ಹೇಳಿ ದೂರನ್ನು ನೀಡಿದ್ದು ಸದರಿ ಹಣವನ್ನು ಹರೀಶ್ ರವರು ವಾಪಾಸ್ ನೀಡಬೇಕು ಎಂದು ಜಾಮೀನು ಹಾಕಿಸಿಕೊಂಡು ಅಗ್ರಿಮೆಂಟ್ ನಲ್ಲಿ ಬರೆದಿರುವ ವಿಚಾರಕ್ಕೆ ನಾನು ಸಹಿಯನ್ನು ಹಾಕಿರುತ್ತೇನೆ. ನಿಪಿ-6 ರಲ್ಲಿ ಬರೆದಿರುವ ವಿಚಾರವನ್ನು ನಾನು ಓದಿರುವುದಿಲ್ಲ. ನನ್ನ ಮುಂದೆ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ. ನನ್ನನ್ನು ನೋಟರಿಯವರ ಮುಂದೆ ಕರೆಹಿಸಿ ಸಹಿಯನ್ನು ಪಡೆದಿರುವುದಿಲ್ಲ. ಈ ವಿಚಾರವನ್ನು ಹೊರತುಪಡಿಸಿ ಬೇರೆ ವಿಚಾರ ನನಗೆ ಗೊತ್ತಿಲ್ಲ.

<u>ಪಾಟೀ ಸವಾಲುಃ ಪಿರ್ಯಾದುದಾರ ಪರ ವಕೀಲರಿಂದಃ-</u>

ನಾನು ಐ.ಟಿ.ಐ ಓದಿರುತ್ತೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ್ ಚೆನ್ನಾಗಿ ಓದಲು ಮತ್ತು ಬರೆಯಲು ಬರುತ್ತದೆ. ನಿಪಿ-6 ನ್ನು ಓದಲು ಏನಾದರೂ ತೊಂದರೆ ಇತ್ತೇ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ತೊಂದರೆ ಇರಲಿಲ್ಲ ಎಂದು ನುಡಿಯುತ್ತಾರೆ. ನಿಪಿ-6 ರಲ್ಲಿ ಚಂದ್ರಶೇಖರ್ ರವರ ಹೆಸರು ಇತ್ತೋ ಇಲ್ಲವೋ ಎಂದು ನಾನು ಓದಿರುವುದಿಲ್ಲ. ದಿಃ31.05.2018 ರಂದು ನಿಪಿ-6 ಕ್ಕೆ ನಾನು ಚಿಕ್ಕಮಗಳೂರು ನ್ಯಾಯಾಲಯದ ಆವರಣದಲ್ಲಿ ನೋಟರಿಯವರ ಮುಂದೆ ಸಹಿಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಆಮಿಷ ಒಡ್ಡಿದ್ದರಿಂದ ನಾನು ಆರೋಪಿಯ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ವಿಚಾರಕ್ಕೂ ನಿಪಿ-6 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಯು ನರೇಂದ್ರರವರಿಗೆ 20 ಲಕ್ಷ ಹಣವನ್ನು ನೀಡುವ ವಿಚಾರಕ್ಕೆ ಸಂಬಂಧಪಟ್ಟು

ನಾನು ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಚಂದ್ರಶೇಖರ್ ರವರಿಗೂ ನಿಪಿ-6 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ವೆಂಕಟೇಶ್ ಎನ್ನುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಬಹುದು. ನಾನು ಸದರಿ ದಿನ ಹರೀಶ್ ರವರ ಜೊತೆಗೆ ನ್ಯಾಯಾಲಯದ ಆವರಣಕ್ಕೆ ಬಂದು ನೋಟರಿಯವರ ಮುಂದೆ ಸಹಿಯನ್ನು ಹಾಕಿ ಆರೋಪಿ ಹರೀಶ್ ರವರ ಬಳಿ ಪಿರ್ಯಾದುದಾರರಿಗೆ ತೊಂದರೆ ಮಾಡಬೇಡಿ ಎಂದು ಮೌಖಿಕವಾಗಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಈ ದಿನ ಆರೋಪಿಯೇ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ಆರೋಪಿಯ ಆಮಿಷಕ್ಕೆ ಒಳಗಾಗಿ ಈ ದಿನ ಆರೋಪಿ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿಪಿ-6 ಕ್ಕೆ ಎಸ್.ಪಿ ಕಛೇರಿಯ ಮುಂದೆ ಸಹಿಯನ್ನು ಹಾಕಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
(ಕುಮಾರಿ ಸುಜಾತ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ